# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ.136/2024

ಅಸಾ ಃ 05
ಚಾಸಾ ಃ 07

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪುಟ್ಟಪ್ಪ ಬಾರ್ಕಿ |
| ತಂದೆಯ ಹೆಸರು | ಃ | ಪರಸಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ ಸ್ಥಳ | ಃ | ಉದಗಟ್ಟಿ, ರಾಣೆಬೆನ್ನೂರು ತಾ. |

ದಿನಾಂಕಃ **29/04/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –**

1. ಚಾಸಾ-1 ಮತ್ತು 6 ನನಗೆ ಗೊತ್ತು. 2024 ರಲ್ಲಿ ನಾನು ಒಂದು ಮಹೀಂದ್ರಾ ಬೊಲೆರೊ ಗೂಡ್ಸ ವಾಹನ ಖರೀದಿಸಿದೆ. ಅದರ ಸಂಖ್ಯೆ ಕೆಎ 68-5952 ಇರುತ್ತದೆ. ಸದರಿ ವಾಹನ ಕರ್ಜಗಿ ಕ್ರಾಸ ನಲ್ಲಿರುವ ಕೆಎಂಎಫ್ ನವರಿಗೆ ಕೊಟ್ಟಿದ್ದೆ. ಚಾಸಾ-1 ಚಾಲಕನಾಗಿ ಹಾಗೂ ಚಾಸಾ-6 ಕ್ಲೀನರಾಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ಮತ್ತು 6 ಚೌಡಯ್ಯದಾನಾಪುರ, ಚಂದಾಪುರ, ಕುದರಿಹಾಳ, ಉದಗಟ್ಟಿ, ಹರನಗಿರಿ, ನೀಲದಹಳ್ಳಿ ಮತ್ತು ಇತರ ಹಳ್ಳಿಗಳಿಗೆ ಹೋಗಿ ಕ್ಯಾನಿನಲ್ಲಿ ಹಾಲು ತುಂಬಿಕೊಂಡು ಕರ್ಜಗಿ ಹತ್ತಿರ ಇರುವ ಕೆಎಂಎಫ್ ಗೆ ಪೂರೈಸುತ್ತಿದ್ದರು.

2. ದಿನಾಂಕಃ08/08/2024 ರಂದು ರಾತ್ರಿ 11.45/12.00 ಘಂಟೆಗೆ ಚಾಸಾ-1 ನನಗೆ ಪೋನ ಮೂಲಕ ಸಂಪರ್ಕಿಸಿ ಘಟನೆ ಕುರಿತು ತಿಳಿಸಿದ. ವಾಹನವನ್ನು ನನ್ನ ಸ್ವಾಧೀನಕ್ಕೆ ಪಡೆದೆ. ಪೊಲೀಸರು ನನ್ನ ಹೇಳಿಕೆ ಪಡೆದರು.

**ಪಾಟೀ ಸವಾಲುಃ 3 ನೇ ಆರೋಪಿ ಪರಃ ಶ್ರೀ ಡಿ.ಟಿ.ಬಿ. ವಕೀಲರಿಂದಃ–**

3. ಪೊಲೀಸರು ನನ್ನ ಹೇಳಿಕೆಯನ್ನು ಘಟನೆ ನಡೆದ ಮರುದಿನ ಪಡೆದರು. ಘಟನೆ ಮರುದಿನ ಬೆಳಿಗ್ಗೆ ನನಗೆ ವಿಷಯ ಗೊತ್ತಾಯಿತೆಂದು ಪೊಲೀಸರ ಮುಂದೆ ಹೇಳಿದ್ದೇನೆ ಎನ್ನುವುದು ಸುಳ್ಳು. ಘಟನೆ ದಿನ ನಾನು ಗುನ್ಹೆ ಜಾಗೆಗೆ ಹೋಗಿಲ್ಲ. ಮರುದಿನ ಹೋದೆ.

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರಃ ಶ್ರೀ ಎನ್.ಜಿ.ಎಚ್. ವಕೀಲರಿಂದಃ-</u>**

4. ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಳ್ಳಿಗಳು ರಾಣೆಬೆನ್ನೂರು ತಾಲೂಕಿನಲ್ಲಿ ಇವೆ ಎನ್ನುವುದು ನಿಜ. ಚಂದಾಪುರ-ಕರ್ಜಗಿ ಮಾರ್ಗವಾಗಿ ಕೆಎಂಎಫ್ ಗೆ ಬರಬಹುದು ಎನ್ನುವುದು ನಿಜ. ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸುಳ್ಳು.

(ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)

**<u>ಮರು ವಿಚಾರಣೆಃ</u>** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.